


ಧರ್ಮಗುರು ಟೋನಿ ಅಲಾಮೊ | ಅಲಾಮೊ ಕ್ರೈಸ್ತ ರಾಷ್ಟ್ರ | ಸಂಪುಟ 21200

# ಸೊದೋಮ್ ಮತ್ತು ಗೊಮೋರ

**ಟೋನಿ ಅಲಾಮೊ ಅವರಿಂದ**



ಇಸ್ರಾಯೇಲಿನಲ್ಲಿ ಯೆರಿಕೋ ಹತ್ತಿರ ಸೊದೋಮ್ ಮತ್ತು ಗೊಮೋರ ಎಂಬ ಜಾಗವಿದೆ. [1] ನೀವು ಅದನ್ನು ನೋಡಿದರೆ, ಅದು ದೇವರ ನ್ಯಾಯ ವಿಚಾರಣೆ ಎಂದು ನಿಸ್ಸಂಶಯವಾಗಿ ನಿಮಗೆ ತಿಳಿಯುತ್ತದೆ! [2] ನೀವು ಗಂಧಕದ (ಸಲ್ಫರ್) ಹಳದಿ ಬಣ್ಣದ ತುಂಡುಗಳನ್ನು ಎತ್ತಿಕೊಳ್ಳಬಹುದು ಮತ್ತು ನೀವು ಅವುಗಳಿಗೆ ಬೆಂಕಿ ಹತ್ತಿಸಿದಾಗ, ಅವು ಉರಿಯುತ್ತವೆ. ಅದು ನೀವು ಎಂದೂ ನೋಡಬಹುದಾದ ಅತ್ಯಂತ ಭೀತಿ ಹುಟ್ಟಿಸುವ ದೃಶ್ಯ. ದೇವರು ಬೆಟ್ಟದ ತುದಿಗಳನ್ನು ಜೂಡೋ ಕೊಚ್ಚೇಟಿನಿಂದ ದೊಡ್ಡ ತುಂಡುಗಳನ್ನಾಗಿ ಕಡಿದು, ತನ್ನ ಬೃಹತ್ ಮುಷ್ಟಿಯಿಂದ ಪುಡಿಪುಡಿ ಮಾಡಿ ಎಲ್ಲವನ್ನೂ ತಳಕ್ಕೆ ರಾಶಿ ಹಾಕಿ, ಅದನ್ನು ಉಪ್ಪು, ಗಂಧಕ, ಮತ್ತು ಬೆಂಕಿಯಡಿಯಲ್ಲಿ ಹೂಣಿಟ್ಟಂತೆ ಬೆಟ್ಟಗಳು ಕಾಣುತ್ತವೆ. ಗಂಧಕದ ಒಂದು ಹಳದಿ ತುಂಡನ್ನು ಸ್ಮಾರಕವಾಗಿ ಮನೆಗೆ ತೆಗೆದುಕೊಂಡು ಹೋಗಿ. ಸಾರ್ವಜನಿಕರು "ಸಲಿಂಗ ವಿವಾಹ ಸರಿಯೇ ಎಂದು ನೋಡಲು ಮತ ಹಾಕೋಣ" ಎಂದು ಹೇಳಿದಾಗ, ಮತಪೆಟ್ಟಿಗೆಯಲ್ಲಿ ಹಾಕಲು ಒಂದು ಹೆಚ್ಚಿನ ತುಂಡನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಿ. ದೇವರ ಪದ ಸತ್ಯವಲ್ಲ ಎಂದು ಗುಂಪಿನೊಂದಿಗೆ ಎಂದೂ ಹೇಳಬೇಡಿ! ದೇವರ ಪದವಿಲ್ಲದೆ ಸರಿ, ತಪ್ಪು, ಒಳ್ಳೆಯದು, ಅಥವಾ ಕೆಟ್ಟದ್ದು ಏನೆಂಬುದನ್ನು ತಿಳಿದುಕೊಳ್ಳಲು ನಮಗೆ ಸಾಧ್ಯವಿಲ್ಲ! [3]

ಈ ಸಂಪೂರ್ಣ ಪ್ರದೇಶ ಪವಿತ್ರ ನಾಡಿನಲ್ಲಿ ಬೇರೆ ಯಾವುದೇ ಜಾಗಕ್ಕಿಂತ ಹೆಚ್ಚು ಬಿಸಿಯಾಗಿದೆ. ಇದು ಅತ್ಯಂತ ನಿರ್ಜೀವ ಪ್ರದೇಶ ಕೂಡ ಆಗಿದೆ. ಹತ್ತಿರದಲ್ಲೇ ಉಪ್ಪಿನ ದೊಡ್ಡ ಬೆಟ್ಟಗಳಿವೆ. [4] ಯೋರ್ದನ್ ನದಿ ಎಷ್ಟೇ ಹರಿದು ತನ್ನ ತಾಜಾ ನೀರನ್ನು ಡೆಡ್ ಸೀ ಒಳಗೆ ಎಷ್ಟೇ ಸುರಿದರೂ, ಡೆಡ್ ಸೀ ನ ನೀರು ವಿಪರೀತ ಉಪ್ಪಿನಂಶ ಹೊಂದಿದೆ, ಮತ್ತು ಅದು ಎಂದೂ ಜೀವಕ್ಕೆ ಆಧಾರವಾಗುವುದಿಲ್ಲ, ಮೀನು ಉತ್ಪಾದಿಸುವುದಿಲ್ಲ. ಬೆಟ್ಟಗಳ ಕುಸಿತವು ಪ್ರದೇಶವನ್ನು ಬಹಳ ಬರಡುಗೊಳಿಸಿದೆ, ಮತ್ತು ಹೋಟೆಲುಗಳ ಬಳಿಯ ಭೂಮಿಯಲ್ಲಿ ದೊಡ್ಡ ಗುಂಡಿ ಇದೆ. ಪ್ರದೇಶವನ್ನು ಏಂಗೆದಿ ಎಂದು ಕರೆಯಲಾಗುತ್ತದೆ, ಅದರ ಅರ್ಥ "ಕುರಿಯ ಕಣ್ಣು". ಅಲ್ಲಿ ಮೂರು ದೊಡ್ಡ ಹೋಟೆಲುಗಳು , ಮತ್ತು ಹತ್ತು ಚಿಕ್ಕ ಹೋಟೆಲುಗಳು ಇವೆ ಮತ್ತು ಎಲ್ಲಾ ಹೋಟೆಲುಗಳಲ್ಲಿ ಈಜುಕೊಳಗಳಿವೆ. ಆ ದೊಡ್ಡ ಗುಂಡಿ ಮತ್ತು ನಿಜವಾದ ನಾಶನವು ಏಂಗೆದಿಯಿಂದ ಬೇರ್ಶೆಬಾಗೆ ಹೋಗುವ ಹಿಂಬದಿಯ ದಾರಿಯಲ್ಲಿವೆ. ನೀವು ಗುಂಡಿಯ ಮೇಲಿನ ಅಂಚಿನಲ್ಲಿ ನಿಂತಾಗ, ಸೊದೋಮ್ ಮತ್ತು ಗೊಮೋರಗಳ ನಾಶವಾದ, ಕುಸಿದ ಬೆಟ್ಟ ಪ್ರದೇಶಗಳನ್ನು ನೀವು ಸ್ಪಷ್ಟವಾಗಿ ನೋಡಬಹುದು. ಗುಂಡಿಯ ಹಿಂದೆ, ಮೋಡಗಳು ಮತ್ತು ಮಂಜಿನಿಂದ ಆವೃತವಾದ ಬೆಟ್ಟಗಳಿವೆ. ಆ ನಿಶ್ಯಬ್ದತೆ ಮತ್ತು ಬರಡು ಸ್ಥಿತಿ ನಿಮ್ಮನ್ನು ಧೈರ್ಯಗೆಡಿಸುತ್ತವೆ. ಗುಂಡಿಯ ತಳವನ್ನು ನೋಡುವುದು ಬಹುತೇಕ ಅಸಾಧ್ಯವೇ, ಮತ್ತು ಅದು ಬಹಳ ಅಗಲವಾಗಿದೆ.

ಸೊದೋಮ್ ಮತ್ತು ಗೊಮೋರಗಳ ನಾಶನ ಮತ್ತು ಅವುಗಳನ್ನು ಹೂಣಿಡುವುದಕ್ಕೆ ಕಾರಣವಾದ ಭೂಮಿಯ ಮೇಲಿನ ದೊಡ್ಡ ಗುಂಡಿಗಳು - ಭೂಮಿಯು ಭಾಗವಾಗುವಷ್ಟು ದೊಡ್ಡ ಗುಂಡಿಗಳು - ಎಷ್ಟಿವೆ? ಯೆರಿಕೋವನ್ನು ಕೂಡ ಸೇರಿಸಬೇಕು, ಏಕೆಂದರೆ ಸೊದೋಮ್ ಕೇವಲ ಯೆರಿಕೋದಲ್ಲಿರುವ ಒಂದು ಜಿಲ್ಲೆಯಷ್ಟೆ. ನೀವು ಯೆರೂಸಲೇಮಿನಿಂದ ಯೆರಿಕೋಗೆ ಬೆಟ್ಟದ ದಾರಿಯಲ್ಲಿ ಕೆಳಗಿಳಿಯುತ್ತಿದ್ದಂತೆ, ನಿಮ್ಮ ಕಿವಿಗಳಲ್ಲಿ ವಿಸ್ಫೋಟದ ಶಬ್ದ ಕೇಳಿಸುತ್ತದೆ, ನೀವು ವಿಮಾನದಲ್ಲಿ ಇಳಿಯುತ್ತಿರುವಂತೆ. ಯೆರಿಕೋ ಸಮುದ್ರ ಮಟ್ಟದಿಂದ ಬಹಳ ಕೆಳಗಿದೆ, ಸಂಪೂರ್ಣ ಭೂಮಿಯಲ್ಲಿ ಅತ್ಯಂತ ಕೆಳಮಟ್ಟದ ಜಾಗ. ಏಕೆಂದರೆ ದೇವರು ಸಂಪೂರ್ಣ ಪ್ರದೇಶವನ್ನು ಜಜ್ಜಿದರು. ಅವರು ಮಾಡಿದ ಪಾಪಕ್ಕಾಗಿ ಆತ ಇದನ್ನು ಭೂಮಿಯ ಮೇಲಿನ ಅತ್ಯಂತ ಕೆಳಮಟ್ಟದ ಪ್ರದೇಶವನ್ನಾಗಿ ಮಾಡಿದರು.[5]

ಯೆರಿಕೋ, ಪಟ್ಟಣವನ್ನು ಹೊರತುಪಡಿಸಿ, ಬಹುಮಟ್ಟಿಗೆ ಖಾಲಿಯಾಗಿದೆ, ಮತ್ತು ಅಲ್ಲಿ ಅಲ್ಪ ಸ್ವಲ್ಪ ಜೀವವಿದೆ, ಏಕೆಂದರೆ ಆ ಭೂಮಿ ಶಾಪಗ್ರಸ್ತವಾಗಿದೆ. ಅದು ದುಃಖವನ್ನುಂಟುಮಾಡುತ್ತದೆ. ಭೂದೃಶ್ಯ ಬಹಳ ಕ್ರೂರವಾಗಿದೆ. ಜನರು ಆ ಭೂಮಿಯನ್ನು ಅಭಿವೃದ್ಧಿಪಡಿಸಲು ಎಷ್ಟೋ ಪ್ರಯತ್ನಪಟ್ಟರೂ ಅದರಲ್ಲಿ ಸ್ವಲ್ಪ ಜೀವ ತುಂಬಲು ಸ್ವಲ್ಪ ವಿನೋದ ತುಂಬಲು ಪ್ರಯತ್ನಿಸಿದರೂ, ಭೂಮಿಯು ಅವರನ್ನು ಹಿಂದಟ್ಟುತ್ತದೆ, ಮತ್ತು ಅದು ಸಮೃದ್ಧವಾಗುವುದಿಲ್ಲ. ಅಲ್ಲಿ ನಾಶವಾಗಿರುವ ವಿವಿಧ ಗುಹೆಗಳು ಮತ್ತು ಮನೆಗಳನ್ನು ನೀವು ನಿಜವಾಗಿಯೂ ನೋಡಬಹುದು. ಅಲ್ಲಿ ಕೆಲವೇ ಕೆಲವು ಜನರಿದ್ದಾರೆ, ಮತ್ತು ಹೆಚ್ಚಿನವರು ಕುರುಬರು. ಅವರ ಬದುಕು ಬಹಳ ಕಠಿಣವಾಗಿದೆ ಮತ್ತು ನಿರ್ದಯವಾಗಿದೆ, ಏಕೆಂದರೆ ಆ ಭೂಮಿ ಅಷ್ಟು ಕ್ರೂರವಾಗಿದೆ, ಮತ್ತು ಅವರ ಮುಖಗಳು ಕಲ್ಲು ಬಂಡೆಗಳಂತೆ ಗಡಸಾಗಿ ಕಾಣುತ್ತವೆ.

ದೇವರು ಆ ಪ್ರದೇಶದಲ್ಲಿ ಸುರಿದ ಗಂಧಕದ ಕಲ್ಲುಗಳನ್ನು ಇಂದಿಗೂ ಜನರು ಹೆಕ್ಕುತ್ತಾರೆ. ಅವರು ಸ್ಮಾರಕಗಳನ್ನು ತೆಗೆದುಕೊಂಡು ಬೆಂಕಿಕಡ್ಡಿಗಳಿಂದ ಆ ಗಂಧಕದ ಕಲ್ಲುಗಳಿಗೆ ಬೆಂಕಿ ಹಚ್ಚಲು ಪ್ರಯತ್ನಿಸುತ್ತಾರೆ. ಗೋರಿ ಕಳ್ಳರು ಮತ್ತು ಪುರಾತತ್ತ್ವಜ್ಞರು ಶವಪೆಟ್ಟಿಗೆಗಳು ಮತ್ತು ಗೋರಿಗಳಿಗಾಗಿ ಈ ಪ್ರದೇಶಗಳಿಗೆ ಪದೇ-ಪದೇ ಬರುತ್ತಾರೆ. ಪುರಾತತ್ತ್ವಜ್ಞರಿಗೆ ಸಿಗುವ ಮೊದಲು ತಾವು ಮಾರಾಟ ಮಾಡಬಹುದಾದ ಶವಗಳಿಗಾಗಿ, ಜಾಡಿಗಳಿಗಾಗಿ, ಕಪ್‌ಗಳಿಗಾಗಿ, ಆಭರಣಗಳಿಗಾಗಿ, ಮತ್ತು ಫರ್ನಿಚರಿಗಾಗಿ ಕಳ್ಳರು ರಾತ್ರಿ ವೇಳೆ ಅಗೆಯುತ್ತಾರೆ. ಅವರು ನಾಶವಾದ ಗುಹೆಗಳನ್ನು ಮತ್ತು ಮನೆಗಳನ್ನು ಬಂಡೆಕಲ್ಲುಗಳಿಂದ, ಗಂಧಕಗಳಿಂದ ಅಗೆದು ಹೊರತೆಗೆಯಲು ಕೂಡ ಪ್ರಯತ್ನಿಸುತ್ತಾರೆ.

ಈ ಪ್ರದೇಶದಲ್ಲಿ ನಾಶನದ ಪ್ರಮಾಣವನ್ನು ನೋಡಿದ ಯಾರೇ ಆಗಲಿ, ಇದು ನಿಜವಾಗಿಯೂ ಆ ಪ್ರದೇಶದಲ್ಲಿ ದೇವರ ನಾಶನ ಮತ್ತು ಶಿಕ್ಷೆ ಎಂಬುದನ್ನು ನಿಸ್ಸಂಶಯವಾಗಿ ತಿಳಿಯುತ್ತಾರೆ, ಏಕೆಂದರೆ ಸೊದೋಮ್ ಮತ್ತು ಸುತ್ತಮುತ್ತಲಿನ ಗ್ರಾಮಗಳ ಪ್ರದೇಶವನ್ನು ಹೊರತುಪಡಿಸಿ, ಇಸ್ರಾಯೇಲಿನ ಸಂಪೂರ್ಣ ದೇಶ ಹಸಿರಾಗಿದೆ ಮತ್ತು ಅಭ್ಯುದಯದಲ್ಲಿದೆ. ದೇವರು ಬೇಗನೆ

*(ಪುಟ 4ರಲ್ಲಿ ಮುಂದುವರಿದಿದೆ)*

**1** ಆದಿಕಾಂಡ. 18:20-33, 19:1-29, ಧರ್ಮೋಪದೇಶಕಾಂಡ. 29:23 **2** ಆದಿಕಾಂಡ.. 6-7, ಅರಣ್ಯಕಾಂಡ 11:1, ಧರ್ಮೋಪದೇಶಕಾಂಡ 4:24, 10:17, 32:4, 15-16, 19-26, 35:43, ಕೀರ್ತನೆಗಳು 2:1-5, 12, 7:11-12, 11:5-6, 21:8-9, ಯೆಶಾಯ 30:1-3, 30, 33, 66:15-16, 24, ಯೆರೆಮೀಯ 7:20, 10:10, 21:11-14, ಪ್ರಲಾಪಗಳು 4:11, ನಹೂಮನು 1:2-8, ಮತ್ತಾಯ 25:31-46, 2 ಕೊರಿಂಥದವರಿಗೆ 5:10-11, ಇಬ್ರಿಯರಿಗೆ 10:30-31, 2 ಪೇತ್ರನು 2:4-9, ಯೂದನು 7, ಪ್ರಕಟನೆ 14:9-11, 20:11-15 **3** ವಿಮೋಚನಕಾಂಡ 20:1-7, ಧರ್ಮೋಪದೇಶಕಾಂಡ 5:1-21, ಯೆಹೋಶುವ 1:8, ಕೀರ್ತನೆಗಳು 119:9, 104-105, 130, ಜ್ಞಾನೋಕ್ತಿಗಳು 6:23, ಮಲಾಕಿಯನು 4:4, ಯೋಹಾನನು 5:24, 8:31-32,12:48, 15:3, 2 ತಿಮೊಥೆಯನಿಗೆ 3:15-17, ಯಾಕೋಬನು 1:21-25, 2 ಪೇತ್ರನು 1:19 **4** ಆದಿಕಾಂಡ. 19:24-26, ಧರ್ಮೋಪದೇಶಕಾಂಡ 29:23, ಯೆಶಾಯ 13:19-22, ಯೆರೆಮೀಯ 50:40, ಪ್ರಲಾಪಗಳು 4:6, ಚೆಫನ್ಯ 2:9 **5** ಆದಿಕಾಂಡ 13:13, 18:20-21, 19:1-13, 24-25, ಯೆಹೆಜ್ಕೇಲನು 16:49-50, ಯೂದನು 7

# ಸೊದೋಮ್ ಮತ್ತು ಗೊಮೋರ ಇರುವ ಸ್ಥಳ

ಆದಿಕಾಂಡ 19:27-28 ಹೀಗೆಂದು ಹೇಳುತ್ತದೆ, "ಇತ್ತಲಾಗಿ ಅಬ್ರಹಾಮನು ಬೆಳಿಗ್ಗೆ ಎದ್ದು ತಾನು ಯೆಹೋವನ ಸನ್ನಿಧಿಯಲ್ಲಿ ನಿಂತಿದ್ದ ಸ್ಥಳಕ್ಕೆ ತಿರುಗಿ ಬಂದು ಸೊದೋಮ್ ಗೊಮೋರಗಳ ಕಡೆಗೂ ಆ ಎಲ್ಲಾ ಸೀಮೆಯ ಕಡೆಗೂ ನೋಡಿದಾಗ, ಅಯ್ಯೋ, ಆ ಪ್ರದೇಶದಿಂದ ಹೊಗೆಯು ಆವಿಯ ಹೊಗೆಯಂತೆ ಏರಿತು."

1980ರ ಆರಂಭದಲ್ಲಿ, ಬೈಬಲ್ಲಿಗೆ ಸಂಬಂಧಿಸಿದ ತಾಣಗಳ ಪುರಾತತ್ತ್ವ ಪರಿಶೋಧಕರಾದ ರಾನ್ ವ್ಯಾಟ್, ಡೆಡ್ ಸೀ ಯ ತಟದಲ್ಲಿ ಹಾದುಹೋಗುತ್ತಿದ್ದಂತೆ ಕೆಲವು "ರಚನೆಗಳ" ವಿಚಿತ್ರ ಪ್ರಕಟಣೆಯನ್ನು ಗಮನಿಸಿದರು. ಆತನಿಗೆ ಅವು ನಗರದ ಗೋಡೆಗಳು ಮತ್ತು ಕಟ್ಟಡಗಳಂತೆ ಕಂಡವು, ಆದರೆ ಅವು ಬಿಳಿ ಬಣ್ಣದ್ದಾಗಿದ್ದವು. ಹಲವಾರು ವರ್ಷಗಳ ವರೆಗೆ ಆತ ತನ್ನ ಸಂಶಯಗಳ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ, ಆದರೆ 1989ರಲ್ಲಿ, ಈ ಬಿಳಿ ಬಣ್ಣದ ರಚನೆಗಳು ಕೇವಲ ಭೂವೈಜ್ಞಾನಿಕ ರಚನೆಗಳಲ್ಲ ಎಂದು ಆತನಿಗೆ ಮನವರಿಕೆ ಮಾಡಿದ ಒಂದು ವಿಷಯವನ್ನು ರಾನ್ ಕಂಡುಹಿಡಿದರು.

### ಭೂವೈಜ್ಞಾನಿಕ ಪದರಗಳಿಗಿಂತಲೂ ಹೆಚ್ಚಿನವುಗಳು

ಆ ಬಿಳಿ ಬಣ್ಣದ ವಸ್ತುಗಳಲ್ಲಿ ಕೆಲವವುಗಳ ಮೂಲಕ ಒಂದು ರಸ್ತೆಯನ್ನು ಕಡಿಯಲಾಗಿತ್ತು ಎಂದು ರಾನ್ ಕಂಡುಹಿಡಿದರು. ಹೊಸದಾಗಿ ತೆರೆದಿಡಲಾಗಿದ್ದ ಆ ವಸ್ತುವಿನ ಒಳಭಾಗವು ಪದರು-ಪದರಾದ ಪ್ರಭಾವವನ್ನು ಪ್ರದರ್ಶಿಸಿತು. ಇವು ಭೂವೈಜ್ಞಾನಿಕ ಪದರಗಳಿಗಿಂತಲೂ ಹೆಚ್ಚಿನವುಗಳು ಎಂಬುದನ್ನು ಸ್ಪಷ್ಟಪಡಿಸುವಂಥ ರೀತಿಯಲ್ಲಿ ಇವು ಸುರುಳಿ ಕಟ್ಟಿದ್ದವು.

ತಮ್ಮ ತಾಣಗಳಿಗೆ ಸುಳಿವುಗಳಿಗಾಗಿ ಬೈಬಲ್ ನಲ್ಲಿ ಹುಡುಕಾಡುವಾಗ, ರಾನ್ ಮತ್ತು ಆತನ ಹೆಂಡತಿ ಮೇರಿ ನೆಲ್, ಕಾನಾನ್ಯರ ಗಡಿಗಳ ಭಾಗವಾಗಿದ್ದ ನಾಲ್ಕು ಪಟ್ಟಣಗಳ ಬಗ್ಗೆ ಹೇಳುವ ಧರ್ಮಗ್ರಂಥ ಉಲ್ಲೇಖಗಳನ್ನು ಕಂಡರು:

"ಕಾನಾನ್ಯರ ಸೀಮೆಯು ಸೀದೋನ್ ಪಟ್ಟಣದಿಂದ ಗೆರಾರಿಗೆ ಹೋಗುವ ದಾರಿಯಲ್ಲಿರುವ ಗಾಜಾ ಪಟ್ಟಣದವರೆಗೂ ಮತ್ತು ಸೊದೋಮ್, ಗೊಮೋರ, ಅದ್ಮಾ, ಚೆಬೋಯಿಮ್ ಎಂಬ ಪಟ್ಟಣಗಳಿಗೆ ಹೋಗುವ ದಾರಿಯಲ್ಲಿರುವ ಲೆಷಾ ಊರಿನವರೆಗೂ ಇತ್ತು" (ಆದಿಕಾಂಡ 10:19).

ಸೊದೋಮ್, ಗೊಮೋರ, ಅದ್ಮಾ, ಮತ್ತು ಚೆಬೋಯಿಮ್ ಗಳೆಲ್ಲವೂ ಡೆಡ್ ಸೀ ಯ ದಕ್ಷಿಣ ತುದಿಯಲ್ಲಿ ಒಂದೇ ಸಾಮಾನ್ಯ ಸ್ಥಳದಲ್ಲಿದ್ದರೆ, ಅವುಗಳಲ್ಲಿ ಪ್ರತಿಯೊಂದು ಗಡಿ ಸೂಚಕ ಎಂದು ಪಟ್ಟಿಮಾಡಲ್ಪಡುವುದು ವಿಚಿತ್ರವೆನಿಸುತ್ತದೆ. ಪ್ರತಿಯೊಂದನ್ನು ಗಡಿ ಸೂಚಕ ಎಂದು ಸೇರಿಸುವ ಅವಶ್ಯಕತೆಗಾಗಿ ಆ ಪಟ್ಟಣಗಳು ಪರಸ್ಪರರಿಂದ ಸ್ವಲ್ಪ ದೂರದಲ್ಲಿ ಇರುವುದು ಸಮರ್ಥನೀಯವಾಗಿರುವುದು.

ರಾನ್ ಅವರು ಕಂಡುಹಿಡಿದಿದ್ದ ತಾಣಗಳ ಸ್ಥಳಗಳು, ನಿಜವಾಗಿಯೂ, ಐವತ್ತಕ್ಕಿಂತಲೂ ಹೆಚ್ಚು ಮೈಲು ದೂರದ ವರೆಗೆ ಚದುರಿದ್ದವು. ಒಂದು ಯೆರಿಕೋದ ಉತ್ತರದಲ್ಲಿತ್ತು. ಚೆಬೋಯಿಮ್ ಡೆಡ್ ಸೀ ಯ ಉತ್ತರ ದಿಕ್ಕಿನಲ್ಲಿರುವುದು ಎಂದು ಸೂಚಿಸುವ ಧರ್ಮಗ್ರಂಥದೊಂದಿಗೆ ಇದು ಸಂಪೂರ್ಣವಾಗಿ ಹೊಂದಾಣಿಕೆಯಲ್ಲಿತ್ತು.

"ಅವರೊಡನೆ ಅವನೂ [ಸೌಲನೂ] ಅವನ ಮಗನಾದ ಯೋನಾತಾನನೂ ಬೆನ್ಯಾಮೀನ್ಯರ ಗೆಬದಲ್ಲಿ ಇಳಿದುಕೊಂಡರು. ಫಿಲಿಷ್ಟಿಯರು ಮಿಕ್ಮಾಷಿನಲ್ಲಿ ಪಾಳೆಯಮಾಡಿಕೊಂಡಿದ್ದರು. ಸುಲಿಗೆ ಮಾಡುವುದಕ್ಕೋಸ್ಕರ ಫಿಲಿಷ್ಟಿಯರ ಪಾಳೆಯದಿಂದ ಮೂರು ಗುಂಪುಗಳು ಹೊರಟು ಒಂದು ಗುಂಪು ಒಫ್ರದ ಮಾರ್ಗವಾಗಿ ಶುವಲ್ ದೇಶಕ್ಕೂ ಇನ್ನೊಂದು ಬೇತ್ಹೋರೋನಿನ ಕಡೆಗೂ ಮತ್ತೊಂದು ಚೆಬೋಯೀಮ್ ಕಣಿವೆಯ ಕೆಳಗಿರುವ ಅರಣ್ಯವನ್ನು ನೋಡಬಹುದಾದ ಸ್ಥಳಕ್ಕೂ ಹೋದವು" (1 ಸಮುವೇಲನು 13:16-18).

1989ರ ದ್ವಿತೀಯಾರ್ಧದಲ್ಲಿ, ರಾನ್ ಮತ್ತು ಮೇರಿ ನೆಲ್ ವ್ಯಾಟ್ ಮಸಾದಾದ ಕೆಳಗಿನ ತಾಣಕ್ಕೆ ಭೇಟಿ ಕೊಟ್ಟರು ಮತ್ತು ಬಿಳಿ ವಸ್ತುವಿನ ಮಾದರಿಗಳು ಅವರ ಕೈಗಳಲ್ಲಿ ವಿಭಜನೆ ಹೊಂದಿ ಟ್ಯಾಲ್ಕಮ್ ಪೌಡರ್ ನ ಕಣಗಳಾದವು. ಆ ಸಮಯದಲ್ಲಿ, ಒತ್ತಾಗಿ ಸೇರಿಸಲಾಗಿದ್ದ ಬೂದಿಯ ಒಂದು ತುಂಡಿನಲ್ಲಿ ಹಿಡಿದಿಡಲಾಗಿದ್ದ ಗಂಧಕದ ಕ್ಯಾಪ್ಸೂಲ್ ಒಂದು ನಿಜವಾಗಿಯೂ ಮೇರಿ ನೆಲ್ ಗೆ ಸಿಕ್ಕಿತು; ಆದಾಗ್ಯೂ, ಅದು ಏನಾಗಿತ್ತು ಎಂಬುದರ ಬಗ್ಗೆ ಆಗ ಯಾವುದೇ ತೀರ್ಮಾನಕ್ಕೆ ಬರಲಾಗಿರಲಿಲ್ಲ.

1990ರ ಅಕ್ಟೋಬರಿನಲ್ಲಿ, ರಾನ್ ವ್ಯಾಟ್ ಮತ್ತು ರೈಚರ್ಡ್ ರೀವ್ಸ್ ಆ ಪ್ರದೇಶಕ್ಕೆ ಹಿಂದಿರುಗಿದರು. ಮಸಾದಾದ ಕೆಳಗಿನ ಪ್ರದೇಶವ-




ಸೊದೋಮ್ ಮತ್ತು ಗೊಮೋರ ಪ್ರದೇಶಗಳಲ್ಲಿ ಕಂಡುಬಂದ ಭೂಮಿಯ ಸುರುಳಿ ಪದರಗಳು



ಬೂದಿಯ ಅವಶೇಷಗಳಲ್ಲಿ ಗಂಧಕದ ಕುರುಹಿನ ಫೋಟೋಗಳು

ನ್ನು ಅವರು ಪರೀಕ್ಷಿಸಿದಾಗ, ಆಗಷ್ಟೇ ಮಳೆಯಾಗಿತ್ತು ಎಂದು ಅವರು ಕಂಡುಕೊಂಡರು. ಆ ಪ್ರದೇಶದಲ್ಲಿ ಅವರು ತಿರುಗಾಡುತ್ತಿರುವಾಗ, ಸ್ವಲ್ಪ ದೂರದಲ್ಲಿ ತೆರೆದ ಕೊಠಡಿಯಂತೆ ಅಥವಾ ಗುಹೆಯಂತೆ ತೋರಿದ ಒಂದು ಜಾಗವನ್ನು ರಿಚರ್ಡ್ ನೋಡಿದರು ಮತ್ತು ಆ ಗುಹೆಯ ಬಳಿ ಬಂದಾಗ ಎತ್ತರದ ಒಂದು ಭಾಗದಿಂದ ಇತ್ತೀಚೆಗೆ ಬಿದ್ದಿದ್ದ ಬೂದಿಯ ಒಂದು ದೊಡ್ಡ ತುಂಡನ್ನು ಅವರು ನೋಡಿದರು - ಅದು ಆಗಷ್ಟೇ ಆಗಿದ್ದ ಮಳೆಯ ಕಾರಣ ಬಿದ್ದಿರಬಹುದು. ಇದನ್ನು ನೋಡಲು ರಾನ್ ನಿಂತಾಗ, ಆ ಒಡೆದ ಬೂದಿಯೊಳಗೆ ಹಲವಾರು ಹಳದಿ ಬಣ್ಣದ ಉಂಡೆಗಳನ್ನು ಕಂಡರು. ಕೆಂಪು-ಕಪ್ಪಾದ, ಗಡುಸಾದ ರಿಂಗ್ ಅವನ್ನು ಆವರಿಸಿತ್ತು. ಒಂದನ್ನು ಅತ ಕಿತ್ತು ತೆಗೆದಾಗ, ಅದು ಗಂಧಕ ಎಂದು ಗುರುತಿಸಿದರು. ಹತ್ತಿರದಿಂದ ಪರೀಕ್ಷಿಸಿದಾಗ, ಯಾವುದಕ್ಕಾಗಿ ಹುಡುಕಬೇಕು ಎಂಬುದು ಅರ್ಥವಾದಾಗ ಬೂದಿಯ ಉಳಿಕೆಯಾದ್ಯಂತ ಆವೃತಗೊಂಡ ಗಂಧಕದ ಉಂಡೆಗಳಿದ್ದವು ಎಂಬುದು ಕಂಡುಬಂತು.

ಗಂಧಕದ ಶೋಧನೆಯ ನಂತರ, ವ್ಯಾಟ್ ಪುರಾತತ್ತ್ವಶಾಸ್ತ್ರ ಸಂಶೋಧನೆಯು ಗಂಧಕವು ಈ ರೂಪದಲ್ಲಿ ಬೇರೆಲ್ಲಾದರೂ ಸಿಗಬಹುದೆ ಎಂದು ನೋಡಲು ಅಧ್ಯಯನವೊಂದನ್ನು ಪ್ರಾರಂಭಿಸಿತು. ರಾನ್ ಮತ್ತು ಮೇರಿ ನೆಲ್ ವ್ಯಾಟ್ ಅವರು ರಿಚರ್ಡ್ ರೀವ್ಸ್ ಅವರೊಂದಿಗೆ ವಾಷಿಂಗ್ಟನ್, ಡಿ.ಸಿ.ಯಲ್ಲಿರುವ ಸ್ಮಿತ್ಸೋನಿಯನ್ ಇನ್ಸ್ಟಿಟ್ಯೂಟಿಗೆ ಹೋಗಿ ಗಂಧಕದ ವಿವಿಧ ರೂಪಗಳ ಅವರ ಪ್ರದರ್ಶನವನ್ನು ಪರೀಕ್ಷಿಸಿದರು, ಆದರೆ ಅವುಗಳಲ್ಲಿ ಯಾವುವೂ ಪುಡಿ ಮಾಡಿರುವ ಗಂಧಕದ ಉಂಡೆಗಳಾಗಿರಲಿಲ್ಲ. ಮೇಲಾಗಿ, ಅವುಗಳಲ್ಲಿ ಯಾವುವೂ ಆವೃತಗೊಂಡಿರಲಿಲ್ಲ. ಪ್ರದರ್ಶನದಲ್ಲಿರದ ಮಾದರಿಗಳನ್ನು ಪರೀಕ್ಷಿಸಲು ಕೋರಿಕೆಯನ್ನು ಸ್ಮಿತ್ಸೋನಿಯನ್ ಅಂಗೀಕರಿಸಿತು. ವಿಶ್ವದೆಲ್ಲೆಡೆಯಿಂದ ಗಂಧಕದ ಈ ಸಂಗ್ರಹವು ಐವತ್ತಕ್ಕೂ ಹೆಚ್ಚು ಮಾದರಿಗಳನ್ನು ಹೊಂದಿತ್ತು. ಅವುಗಳಲ್ಲಿ ಯಾವುದೂ "ಬಯಲಿನ ಪಟ್ಟಣಗಳ" ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಿಕ್ಕ ಗಂಧಕದ ಗುಣಗಳನ್ನು ಪ್ರದರ್ಶಿಸಲಿಲ್ಲ.



ರಾನ್ ವ್ಯಾಟ್ ಸೊದೋಮ್ ಮತ್ತು ಗೊಮೋರ ಪ್ರದೇಶದಲ್ಲಿ ಪತ್ತೆಮಾಡಿರುವುದು

ಡೆಡ್ ಸೀ ಬಳಿ ಗಂಧಕವನ್ನು ಕಂಡುಹಿಡಿದವರಲ್ಲಿ ರಾನ್ ವ್ಯಾಟ್ ಮೊದಲಿಗರಾಗಿರಲಿಲ್ಲ. ವಿಲಿಯಂ ಆಲ್ ಬ್ರೈಟ್ ಮತ್ತು ಮೆಲ್ವಿನ್ ಕೈಲ್ 1924ರಲ್ಲಿ ಸೊದೋಮ್ ಮತ್ತು ಗೊಮೋರ ಪಟ್ಟಣಗಳನ್ನು ಹುಡುಕಲು ಹೊರಟಾಗ, ಅವರಿಗೆ ಕೂಡ ಡೆಡ್ ಸೀ ಯ ದಕ್ಷಿಣ ತುದಿಯಲ್ಲಿ ಗಂಧಕದ ಈ ತುಂಡುಗಳು ಸಿಕ್ಕಿದ್ದವು.

“...ಗಂಧಕದ ಮಳೆ ಸುರಿಸಲಾಗಿದ್ದ ಪ್ರದೇಶವು ಗಂಧಕವನ್ನು ತೋರಿಸುತ್ತದೆ. ಹೌದು, ತೋರಿಸುತ್ತದೆ; ನಾವು ಶುದ್ಧ ಗಂಧಕವನ್ನು ಎತ್ತಿಕೊಂಡೆವು, ನನ್ನ ಹೆಬ್ಬೆರಳಿನ ತುದಿಯಷ್ಟು ದೊಡ್ಡದಾದ ತುಂಡುಗಳಲ್ಲಿ. ಅದರಲ್ಲಿ ಸಮುದ್ರದ ಪಶ್ಚಿಮ ಭಾಗದ ಬೆಟ್ಟಗಳು ಸುಣ್ಣಜೇಡಿ ಮಿಶ್ರಿತವಾಗಿವೆ, ಮತ್ತು ಈಗ, ಸ್ತರಶ್ರೇಣಿಯನ್ನು ಹೊಂದಿರುವ ಬಡುವಿನಿಂದ ಸುಮಾರು ನಾಲ್ಕು ಅಥವಾ ಐದು ಮೈಲು ದೂರದಲ್ಲಿ, ಸಮುದ್ರದ ಪೂರ್ವ ಭಾಗದ ತಟದಾದ್ಯಂತ ಕೂಡ ಹರಡಲ್ಪಟ್ಟಿರುವುದು ಕಂಡುಬಂದಿದೆ. ಹೇಗೋ ಏನೋ ಅದು ಈ ಬಯಲಿನ ಮೇಲೆ ದೂರದವರೆಗೆ ಹರಡಲ್ಪಟ್ಟಿದೆ.” (ಡಾ. ಮೆಲ್ವಿನ್ ಕೈಲ್ ಅವರಿಂದ ಎಕ್ಸ್ ಪ್ಲೋರೇಷನ್ಸ್ ಎಟ್ ಸೊದೋಮ್ , 1928, ಪುಟ 52-53)

ಬೂದಿಯ ಉಳಿಕೆಗಳನ್ನು ಗಮನಿಸುವವರಲ್ಲಿ ಮೆಲ್ವಿನ್ ಕೈಲ್ ಕೂಡ ಮೊದಲಿಗರಾಗಿರಲಿಲ್ಲ. ಈ ಪಟ್ಟಣಗಳ ಮತ್ತೊಂದು ದಾಖಲೆ ಜೋಸೆಫಸ್ ಅವರಿಂದ ಅವರ ಪುಸ್ತಕ ವಾರ್ಸ್ ಆಫ್ ದ ಜೂಸ್, ಪುಸ್ತಕ IV, ಅಧ್ಯಾಯ VIII ನಲ್ಲಿದೆ:

“ಈಗ **ಈ ದೇಶ ಎಷ್ಟು ದುಃಖಕರವಾಗಿ ಸುಟ್ಟುಹೋಗಿದೆ** ಎಂದರೆ ಯಾರೂ ಅದರ ಬಳಿ ಬರುವವರಿಲ್ಲ;.....ಹಿಂದಿನ ಕಾಲದಲ್ಲಿ ಅದು ಅತ್ಯಂತ ಆನಂದದ ದೇಶವಾಗಿತ್ತು, ಅದು ಬೆಳೆಯುತ್ತಿದ್ದ ಹಣ್ಣುಗಳು ಮತ್ತು ಅದರ ಪಟ್ಟಣಗಳ ಸಮೃದ್ಧತೆಗಳೆರಡರ ಕಾರಣದಿಂದಲೂ, ಆದರೆ ಈಗ ಅದು ಸಂಪೂರ್ಣವಾಗಿ **ಸುಟ್ಟುಹೋಗಿದೆ.** ಅದರ ನಿವಾಸಿಗಳ ದೈವಭಕ್ತಿರಾಹಿತ್ಯದ ಕಾರಣ ಮಿಂಚಿನಿಂದ ಅದನ್ನು ಸುಡಲಾಯಿತು; ಅದರ ಪರಿಣಾಮವಾಗಿ ಆ **ದಿವ್ಯ ಬೆಂಕಿಯ ಉಳಿಕೆಗಳು ಇನ್ನೂ ಇವೆ; ಮತ್ತು ಆ ಐದು ಪಟ್ಟಣಗಳ ಕುರುಹುಗಳನ್ನು (ಅಥವಾ ನೆರಳುಗಳನ್ನು) ಇನ್ನೂ ಕಾಣಬಹುದು...**”

ಜೋಸೆಫಸ್ ಅವರ ವಿವರಣೆಯು ಈ ಬೂದಿಯ ತಾಣಗಳಲ್ಲಿ ನೋಡಬಹುದಾದುದನ್ನು ಪರಿಪೂರ್ಣವಾಗಿ ವಿವರಿಸುತ್ತದೆ:

**“....ಈಗ ಎಲ್ಲವೂ ಸುಟ್ಟುಹೋಗಿವೆ.”**

ಸೊದೋಮ್, ಗೊಮೋರ, ಮತ್ತು “ಸಂಪೂರ್ಣ ಬಯಲು ಪ್ರದೇಶದ” ನಾಶನದ ಕಥನವು ದಂತಕಥೆಯಾಗಿರಲಿಲ್ಲ. ಬೈಬಲ್ ನ ಹೇಳಿಕೆಯು ಪುಸ್ತುತಪಡಿಸಿರುವಂತೆ ನಿಖರವಾಗಿ ನಡೆದ ಒಂದು ಚಾರಿತ್ರಿಕ ಘಟನೆ ಅದಾಗಿತ್ತು.

http://www.wyattmuseum.com/cities-of-the-plain.htm

## ಸೊದೋಮ್ಮ ಮತ್ತು ಗೊಮೋರ

*(ಪುಟ 1 ರಿಂದ ಮುಂದುವರಿದಿದೆ)*

ತನ್ನ ನಾಶನವನ್ನು ಪುನಃ ಈ ಭೂಮಿಯ ಮೇಲೆ ಮತ್ತು ಸಂಪೂರ್ಣ ಜಗತ್ತಿನ ಮೇಲೆ ತರಲಿದ್ದಾರೆ.[6]

ಯು ಎಸ್ ನಲ್ಲಿ ನಾವು ಎಂದೂ ರಿಕ್ಟರ್ ಮಾಪಕದಲ್ಲಿ 9.2ಕ್ಕಿಂತ ಹೆಚ್ಚಿನ ಭೂಕಂಪವನ್ನು ಅನುಭವಿಸಿಲ್ಲ. ಸೊದೋಮ್ ಮತ್ತು ಗೊಮೋರಗಳ ದೇವರ ನಾಶವನ್ನು ಇಂದಿನ ರಿಕ್ಟರ್ ಮಾಪಕದಲ್ಲಿ ತೀರ್ಮಾನಿಸುವುದಾಗಿದ್ದರೆ, ಅದು 25.0 ಅಥವಾ ಅದಕ್ಕಿಂತ ಹೆಚ್ಚಾಗಿರುತ್ತಿತ್ತು. ಇದರಲ್ಲಿ, ಸಲಿಂಗ ಕಾಮ ಮತ್ತು ವ್ಯಭಿಚಾರಗಳಂಥ ಜನರ ಹೇಸಿಗೆಯ ಲೈಂಗಿಕ ಅಭ್ಯಾಸಗಳ ಕಾರಣ ಜನರ ಮೇಲೆ ಧಾರಾಕಾರವಾಗಿ ಸುರಿದ ಬೆಂಕಿ ಮತ್ತು ಗಂಧಕಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲೇ ಇಲ್ಲ.[7]

ಈ ಸಂಪೂರ್ಣ ಪ್ರದೇಶ ಎಲ್ಲಾ ಜನರಿಗೆ, ವಿಶೇಷವಾಗಿ ಸಲಿಂಗಕಾಮ ಮತ್ತುಸ್ತ್ರೀ ಸಲಿಂಗ ಕಾಮ ಅಭ್ಯಾಸ ಮಾಡುವ ಆ ವಿಕೃತಕಾಮಿಗಳಿಗೆ, ದೇವರ ಒಂದು ಸಾಕ್ಷಿಯಾಗಬೇಕು. ಇವೆಲ್ಲವನ್ನೂ ಗಮನಿಸಿದ ನಂತರ, ದೇವರು ತಮಾಷೆ ಮಾಡುವವರಲ್ಲ ಎಂದು ನಿಮಗೆ ತಿಳಿಯುತ್ತದೆ. ತನ್ನ ಮನಸ್ಸಿನಲ್ಲಿದ್ದುದನ್ನೆ ಆತ ಹೇಳುವುದು.[8] ಇದು ಕಾಲದ ಅಂತ್ಯ, ಆದ್ದರಿಂದ ನೀವು ದೇವರಿಗೆ ಈ ಪ್ರಾರ್ಥನೆಯನ್ನು ಮಾಡುವಾಗ ತಮಾಷೆ ಮಾಡಬೇಡಿ:

**ನನ್ನ ಪ್ರಭುವೇ ಮತ್ತು ನನ್ನ ದೇವರೇ, ಪಾಪಿಯಾದ ನನ್ನ ಮೇಲೆ ಕರುಣೆ ತೋರಿ.[9] ಯೇಸು ಕ್ರಿಸ್ತರು ಜೀವಸ್ವರೂಪನಾದ ದೇವರ ಮಗನು ಎಂದು ನಾನು ನಂಬಿದ್ದೇನೆ.[10] ನನ್ನ ಹಿಂದಿನ ಎಲ್ಲಾ ಪಾಪಗಳನ್ನು ಕ್ಷಮಿಸುವುದಕ್ಕಾಗಿ ಆತ ಶಿಲುಬೆಯಲ್ಲಿ ಮರಣ ಹೊಂದಿದನು ಮತ್ತು ತನ್ನ ಅಮೂಲ್ಯ ರಕ್ತವನ್ನು ಸುರಿಸಿದನು ಎಂದು ನಾನು ನಂಬಿದ್ದೇನೆ.[11] ದೇವರು ಪವಿತ್ರಾತ್ಮನ ಶಕ್ತಿಯಿಂದ ಯೇಸುವನ್ನು ಸತ್ತವರಿಂದ ಪುನರುತ್ಥಾನಗೊಳಿಸಿದರು,[12] ಮತ್ತು ಈ ಗಳಿಗೆಯಲ್ಲಿ ನನ್ನ ಪಾಪನಿವೇದನೆಯನ್ನು ಮತ್ತು ಈ ಪ್ರಾರ್ಥನೆಯನ್ನು ಕೇಳುತ್ತಾ ಆತ ದೇವರ ಬಲಗಡೆಯಲ್ಲಿ ಕುಳಿತಿದ್ದಾನೆ ಎಂದು ನಾನು ನಂಬಿದ್ದೇನೆ.[13] ಪ್ರಭು ಯೇಸುವೇ, ನಾನು ನನ್ನ ಹೃದಯದ ಬಾಗಿಲನ್ನು ತೆರೆದು ನಿಮ್ಮನ್ನು ನನ್ನ ಹೃದಯದೊಳಗೆ ಆಮಂತ್ರಿಸುತ್ತೇನೆ.[14] ಕಾಲ್ವಾರಿಯಲ್ಲಿ ಶಿಲುಬೆಯ ಮೇಲೆ ನನ್ನ ಜಾಗದಲ್ಲಿ ನೀವು ಸುರಿಸಿದ ಅಮೂಲ್ಯ ರಕ್ತದಲ್ಲಿ ನನ್ನ ಎಲ್ಲಾ ಹೊಲಸು ಪಾಪಗಳನ್ನು ತೊಳೆದುಬಿಡಿ.[15] ನೀವು ನನ್ನನ್ನು ತಿರಸ್ಕರಿಸುವುದಿಲ್ಲ, ಪ್ರಭು ಯೇಸುವೇ; ನೀವು ನನ್ನ ಪಾಪಗಳನ್ನು ಕ್ಷಮಿಸುವಿರಿ ಮತ್ತು ನನ್ನ ಆತ್ಮವನ್ನು ರಕ್ಷಿಸುವಿರಿ. ನನಗೆ ಗೊತ್ತು ಏಕೆಂದರೆ ನಿಮ್ಮ ಪದವಾದ ಬೈಬಲ್ ಹೀಗೆಂದು ಹೇಳುತ್ತದೆ.[16] ನೀವು ಯಾರನ್ನೂ ತಿರಸ್ಕರಿಸುವುದಿಲ್ಲ ಎಂದು ನಿಮ್ಮ ಪದ ಹೇಳುತ್ತದೆ, ಮತ್ತು ಅದರಲ್ಲಿ ನಾನೂ ಸೇರಿದ್ದೇನೆ.[17] ಆದ್ದರಿಂದ ನೀವು ನನ್ನ ಮಾತು ಕೇಳಿಸಿಕೊಂಡಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನೀವು ನನಗೆ ಉತ್ತರಿಸಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನಾನು ರಕ್ಷಣೆ ಹೊಂದಿದ್ದೇನೆ ಎಂದು ನನಗೆ ತಿಳಿದಿದೆ.[18] ನನ್ನ ಆತ್ಮವನ್ನು ರಕ್ಷಣೆ ಮಾಡಿದ್ದಕ್ಕಾಗಿ, ಪ್ರಭು ಯೇಸುವೇ, ನಾನು ನಿಮಗೆ ಕೃತಜ್ಞನು, ಮತ್ತು ನೀವು ಆದೇಶಿಸಿದಂತೆ ನಡೆದುಕೊಂಡು ಇನ್ನು ಮುಂದೆ ಪಾಪ ಮಾಡದೆ ನಾನು ನನ್ನ ಕೃತಜ್ಞತೆಯನ್ನು ತೋರಿಸುತ್ತೇನೆ.[19]**

ರಕ್ಷಣೆಯ ನಂತರ, ಯೇಸುವು ತಂದೆಯ, ಮಗನ, ಮತ್ತು ಪವಿತ್ರಾತ್ಮದ ಹೆಸರಿನಲ್ಲಿ, ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿ, ದೀಕ್ಷಾಸ್ನಾನ ಮಾಡಿದರೆಂದು ಹೇಳಲಾಗುತ್ತದೆ.[20] ಬೈಬಲ್ ಸೊಸೈಟಿ ಆಫ್ ಇಂಡಿಯಾದ 'ಸತ್ಯವೇದವು" [ಇಂಗ್ಲಿಷ್ ನ ಕೆಜೆವಿ] ಬೈಬಲ್ ಅನ್ನು ಓದಿ, ಮತ್ತು ನೀವು ಸಾಯುವ ತನಕ ಅದು ಹೇಳಿದ್ದನ್ನು ಮಾಡಿ.[21]

ರಕ್ಷಣೆಯ ಬಗ್ಗೆ ನೀವು ಇತರರಿಗೆ ತಿಳಿಸಬೇಕೆಂದು ಪ್ರಭು ಬಯಸುತ್ತಾರೆ (ಮಾರ್ಕ 16:15). ನೀವು ಪ್ಯಾಸ್ಟರ್ ಟೋನಿ ಅಲಾಮೊ ಅವರ ಸುವಾರ್ತೆಯ ಸಾಹಿತ್ಯದ ವಿತರಕರಾಗಬಹುದು. ನಾವು ನಿಮಗೆ ಸಾಹಿತ್ಯವನ್ನು ಯಾವುದೇ ಶುಲ್ಕವಿಲ್ಲದೆ ಕಳುಹಿಸುತ್ತೇವೆ. ಹೆಚ್ಚಿನ ಮಾಹಿತಿಗಾಗಿ ನಮಗೆ ಕರೆಮಾಡಿ ಅಥವಾ ಇಮೇಲ್ ಮಾಡಿ. ಈ ಸಂದೇಶವನ್ನು ಬೇರೆಯವರೊಂದಿಗೆ ಹಂಚಿಕೊಳ್ಳಿ.

ನಾವು ಪಾಸ್ಟರ್ ಅಲಾಮೊ ಅವರ ಸಾಹಿತ್ಯವನ್ನು ಅನೇಕ ಭಾಷೆಗಳಲ್ಲಿ ಮುದ್ರಿಸುತ್ತೇವೆ, ಮತ್ತು ಪ್ರಂಪಚದೆಲ್ಲೆಡೆ ಕಳುಹಿಸುತ್ತೇವೆ. ನಾವು ಮುದ್ರಣ ಕಾಗದ ಮತ್ತು ಶಿಪ್ಪಿಂಗ್ ಗಾಗಿ ಅನೇಕ ಮಿಲಿಯ ಡಾಲರುಗಳನ್ನುವ್ಯಯಿಸುತ್ತೇವೆ, ಹಾಗಾಗಿ ನಮಗೆ ನಿಮ್ಮ ಪ್ರಾರ್ಥನೆ ಮತ್ತು ಆರ್ಥಿಕ ಸಹಾಯದ ಅಗತ್ಯವಿದೆ.

ಜಗತ್ತು ರಕ್ಷಣೆ ಪಡೆಯಬೇಕೆಂದು ನೀವು ಬಯಸಿದರೆ ಯೇಸು ಆದೇಶಿಸುವಂತೆ, ದೇವರಿಂದ ಆತನ ದಶಾಂಶಗಳನ್ನು ಮತ್ತು ಕೊಡುಗೆಗಳನ್ನು ಕದ್ದುಕೊಳ್ಳಬೇಡಿ. ದೇವರು ಹೀಗೆ ಹೇಳಿದರು, "ನರಮನುಷ್ಯನು ದೇವರಿಂದ ಕದ್ದುಕೊಳ್ಳಬಹುದೇ? ನೀವಾದರೋ ನನ್ನಿಂದ ಕದ್ದುಕೊಳ್ಳುತ್ತಿದ್ದೀರಿ. ನಿನ್ನಿಂದ ಏನು ಕದ್ದುಕೊಂಡಿದ್ದೀರಿ ಎಂದು ಕೇಳುತ್ತೀರೋ? ದಶಾಂಶ ನನಗೋಸ್ಕರ ಪ್ರತ್ಯೇಕಿಸಬೇಕಾದ ಪದಾರ್ಥ, ಇವುಗಳನ್ನೇ. ನೀವು ಅಂದರೆ ಈ ಜನಾಂಗದವರೆಲ್ಲಾ [ಮತ್ತು ಈ ಸಂಪೂರ್ಣ ಜಗತ್ತು] ನನ್ನಿಂದ ಕದ್ದುಕೊಳ್ಳುವವರಾದ ಕಾರಣ ಶಾಪಗ್ರಸ್ತರಾಗಿದ್ದೀರಿ. ನನ್ನ ಆಲಯವು [ರಕ್ಷಣೆ ಹೊಂದಿರುವ ಆತ್ಮಗಳು] ಆಹಾರಶೂನ್ಯವಾಗದಂತೆ [ಆಧ್ಯಾತ್ಮಿಕ ಆಹಾರ] ನೀವು ದಶಾಂಶವನ್ನು [ದಶಾಂಶ ಎಂದರೆ ನಿಮ್ಮ ಒಟ್ಟು ಆದಾಯದ 10%] ಯಾವತ್ತೂ ಬಂಡಾರಕ್ಕೆ ತೆಗೆದುಕೊಂಡು ಬನ್ನಿರಿ; ನಾನು ಪರಲೋಕದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಯಲಾಗದಷ್ಟು ಸುವರವನ್ನು ಸುರಿಯುವೆನೋ ಇಲ್ಲವೋ ನನ್ನನ್ನು ಹೀಗೆ ಪರೀಕ್ಷಿಸಿರಿ; ಇದು ಸೇನಾಧೀಶ್ವರ ಯೆಹೋವನ ನುಡಿ. ನುಂಗುವ ಹುಳವನ್ನು ನಾನು ನಿಮಗಾಗಿ ತಡೆಯುವೆನು, ಅದು ನಿಮ್ಮ ಭೂಮಿಯ ಫಲವನ್ನು ನಾಶ ಮಾಡದು; ನಿಮ್ಮ ದ್ರಾಕ್ಷಿಯ ಹಣ್ಣು ತೋಟದಲ್ಲಿ ಉದುರಿಹೋಗದಂತಾಗುವುದು; ಇದು ಸೇನಾಧೀಶ್ವರ ಯೆಹೋವನ ನುಡಿ. ಆಗ ಸಕಲ ಜನಾಂಗಗಳವರು ನಿಮ್ಮನ್ನು ಧನ್ಯರೆಂದು ಕೊಂಡಾಡುವರು; ನಿಮ್ಮ ದೇಶವು ಆನಂದವಾಗಿರುವದು; ಇದು ಸೇನಾಧೀಶ್ವರ ಯೆಹೋವನ ನುಡಿ" (ಮಲಾಕಿಯ 3:8-12).

---

**6** ಯೆಶಾಯ 13:3-13, 24:1-21, 34:1-10, ಯೆಹೆಜ್ಕೇಲನು 22:25-31, 24:6-14, ಅಧ್ಯಾಯ 38, ಯೋವೇಲನು 1:13-15, ಚೆಫನ್ಯ 3:8, ಮಲಾಕಿಯ 4:1, ಮತ್ತಾಯ 24:3-7, 21-22, 29-34, ಲೂಕ 17:24-30, 2 ಥೆಸಲೋನಿಕದವರಿಗೆ 1:7-10, 2 ಪೇತ್ರನು 3:3-12, ಪ್ರಕಟನೆ 6:15-17, 8:7-13, 9:1-19, 11:18, 16:1-11, 17-21, 19:11-21 **7** ಆದಿಕಾಂಡ 19:4-13, ಯಾಜಕಕಾಂಡ 18:20, 22, 20:13, ಧರ್ಮೋಪದೇಶಕಾಂಡ 22:5, 23:17-18, ನ್ಯಾಯಸ್ಥಾಪಕರು 19:22-28, 1 ಅರಸುಗಳು 14:22-24, ರೋಮಾಪುರದವರಿಗೆ 1:18, 24-32, 1 ಕೊರಿಂಥದವರಿಗೆ 6:9-10, 18, 10:8, 2 ಕೊರಿಂಥದವರಿಗೆ 12:21, ಗಲಾತ್ಯರಿಗೆ 5:19-21, ಎಫೆಸದವರಿಗೆ5:3-6, ಕೊಲೊಸ್ಸೆಯವರಿಗೆ 3:5-7, 1 ಥೆಸಲೋನಿಕದವರಿಗೆ 4:3, 1 ತಿಮೊಥೆಯನಿಗೆ 1:9-10, ಇಬ್ರಿಯರಿಗೆ 13:4, ಯೂದನು 7, ಪ್ರಕಟನೆ 2:21, 9:21, 22:15 **8** ಅರಣ್ಯಕಾಂಡ 23:19, 1 ಸಮುವೇಲನು 15:29, ಕೀರ್ತನೆಗಳು 119:89, ಜ್ಞಾನೋಕ್ತಿಗಳು 19:21, ಪ್ರಸಂಗಿ 3:14, ಯೆಶಾಯ 14:24, 40:8, ಯೆರೆಮೀಯ4:28, ಯೆಹೆಜ್ಕೇಲನು 24:14, ದಾನಿಯೇಲನು 4:35, ಮತ್ತಾಯ 5:17-18 **9** ಕೀರ್ತನೆಗಳು 51:5, ರೋಮಾಪುರದವರಿಗೆ 3:10-12, 23 **10** ಮತ್ತಾಯ 26:63-64, 27:54, ಲೂಕ 1:30-33, ಯೋಹಾನ 9:35-37, ರೋಮಾಪುರದವರಿಗೆ 1:3-4 **11** ಅಪೋಸ್ತಲರ ಕೃತ್ಯಗಳು 4:12, 20:28, ರೋಮಾಪುರದವರಿಗೆ 3:25, 1 ಯೋಹಾನ 1:7, ಪ್ರಕಟನೆ 5:9 **12** ಕೀರ್ತನೆಗಳು 16:9-10, ಮತ್ತಾಯ 28:5-7, ಮಾರ್ಕ 16:9, 12, 14, ಯೋಹಾನ 2:19, 21, 10:17-18, 11:25, ಅಪೋಸ್ತಲರ ಕೃತ್ಯಗಳು 2:24, 3:15, ರೋಮಾಪುರದವರಿಗೆ 8:11, 1 ಕೊರಿಂಥದವರಿಗೆ 15:3-7 **13** ಲೂಕ 22:69, ಅಪೋಸ್ತಲರ ಕೃತ್ಯಗಳು 2:25-36, ಇಬ್ರಿಯರಿಗೆ 10:12-13 **14** 1 ಕೊರಿಂಥದವರಿಗೆ 3:16, ಪ್ರಕಟನೆ 3:20 **15** ಎಫೆಸದವರಿಗೆ 2:13-22, ಇಬ್ರಿಯರಿಗೆ 9:22, 13:12, 20-21, 1 ಯೋಹಾನ 1:7, ಪ್ರಕಟನೆ 1:5, 7:14 **16** ಮತ್ತಾಯ 26:28, ಅಪೋಸ್ತಲರ ಕೃತ್ಯಗಳು 2:21, 4:12, ಎಫೆಸದವರಿಗೆ 1:7, ಕೊಲೊಸ್ಸೆಯವರಿಗೆ 1:14 **17** ಮತ್ತಾಯ 21:22, ಯೋಹಾನ 6:35, 37-40, ರೋಮಾಪುರದವರಿಗೆ 10:13 **18** ಇಬ್ರಿಯರಿಗೆ 11:6 **19** ಯೋಹಾನ 5:14, 8:11, ರೋಮಾಪುರದವರಿಗೆ 6:4, 1 ಕೊರಿಂಥದವರಿಗೆ 15:10, ಪ್ರಕಟನೆ 7:14, 22:14 **20** ಮತ್ತಾಯ 28:18-20, ಯೋಹಾನ 3:5, ಅಪೋಸ್ತಲರ ಕೃತ್ಯಗಳು 2:38, 19:3-5 **21** ಧರ್ಮೋಪದೇಶಕಾಂಡ 4:29, 13:4, 26:16, ಯೆಹೋಶುವ 1:8, 22:5, 2 ತಿಮೊಥೆಯನಿಗೆ 2:15, 3:14-17, ಯಾಕೋಬನು 1:22-25, ಪ್ರಕಟನೆ 3:18

---

ಹೆಚ್ಚಿನ ಮಾಹಿತಿಗಾಗಿ ಅಥವಾ ಆಸಕ್ತಿಕರವಾಗಿರಬಹುದಾದ ಇತರ ವಿಷಯಗಳ ಬಗ್ಗೆ ಸಾಹಿತ್ಯಕ್ಕಾಗಿ ದಯವಿಟ್ಟು ನಮ್ಮನ್ನು ಸಂಪರ್ಕಿಸಿ.
**Tony Alamo, World Pastor, Tony Alamo Christian Ministries Worldwide • P.O. Box 2948, Hollywood, CA 90078**
**24 ಗಂಟೆಗಳ ಪ್ರಾರ್ಥನೆಯ ಸಹಾಯವಾಣಿ: +1 (661) 252-5686 • Fax +1 (661) 252-4362**
**www.alamoministries.com • info@alamoministries.com**

ತಮ್ಮ ಸಂಪೂರ್ಣ ಹೃದಯ, ಆತ್ಮ, ಮನಸ್ಸು, ಮತ್ತು ಬಲದಿಂದ ಪ್ರಭುವಿನ ಸೇವೆ ಮಾಡಲು ನಿಜವಾಗಿಯೂ ಬಯಸುವ ನಮ್ಮ ಎಲ್ಲಾ ಯು.ಎಸ್. ತಾಣಗಳಲ್ಲಿರುವವರಿಗೆ ಬದುಕಿಗೆ ಅಗತ್ಯವಾದ ಎಲ್ಲಾ ಸೌಕರ್ಯಗಳೊಂದಿಗೆ ವಾಸಿಸಲು ಟೋನಿ ಅಲಾಮೊ ಕ್ರಿಶ್ಚಿಯನ್ ಮಿನಿಸ್ಟ್ರೀಸ್ ವರ್ಲ್ಡ್‌ವೈಡ್ ಸ್ಥಳ ಒದಗಿಸುತ್ತದೆ.

ನ್ಯೂ ಯಾರ್ಕ್ ನಗರದಲ್ಲಿ ಪ್ರತಿ ಮಂಗಳವಾರ ಸಂಜೆ 8 ಗಂಟೆಗೆ ಮತ್ತು ಇತರ ಸ್ಥಳಗಳಲ್ಲಿ ರಾತ್ರಿ ವೇಳೆ ಪ್ರಾರ್ಥನಾ ಸಭೆಯನ್ನು ನಡೆಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕೆಳಗಿನ ಸಂಖ್ಯೆಗೆ ಕರೆ ಮಾಡಿ. (908) 937-5723.

333ಕ್ಕೂ ಹೆಚ್ಚಿನ ಭವಿಷ್ಯವಾಣಿಗಳಲ್ಲಿ ಹಳೆ ಒಡಂಬಡಿಕೆಯಿಂದ ಕ್ರಿಸ್ತರನ್ನು ತೋರಿಸುವ ಪ್ಯಾಸ್ಟರ್ ಅಲಾಮೊ ಅವರ, ದ ಮೆಸ್ಸಾಯ, ಪುಸ್ತಕವನ್ನು ಕೇಳಿ ಪಡೆಯಿರಿ.

*ಲಾಸ್ ಏಂಜಲಿಸ್ ಚರ್ಚ್ ಪ್ರದೇಶ:* 13136 *ಸಿಯೆರಾ ಹೈವೇ, ಸಾಂಟಾ ಕ್ಲಾರಿಟಾ, ಕ್ಯಾಲಿಫೋರ್ನಿಯಾ* 91390 (661) 251-9424 *ದಲ್ಲಿ ಪ್ರತಿ ಸಂಜೆ* 8 *ಗಂಟೆಗೆ ಮತ್ತು ಭಾನುವಾರದಂದು ಮಧ್ಯಾಹ್ನ* 3 *ಗಂಟೆಗೆ ಮತ್ತು ರಾತ್ರಿ* 8 *ಗಂಟೆಗೆ ಪ್ರಾರ್ಥನಾ ಸಭೆಯನ್ನು ನಡೆಸಲಾಗುವುದು.*

*ಉಚಿತ ವಾಹನ ಸೇವೆಯನ್ನು ಹಾಲಿವುಡ್ ಬೂಲೆವಾರ್ಡ್ ಮತ್ತು ಹೈಲ್ಯಾಂಡ್ ಅವೆನ್ಯೂ, ಹಾಲಿವುಡ್, ಕ್ಯಾಲಿಫೋರ್ನಿಯಾದ ಮೂಲೆಯಿಂದ ಪ್ರತಿ ಸಂಜೆ* 6.30 *ಕ್ಕೆ, ಭಾನುವಾರಗಳಂದು ಮಧ್ಯಾಹ್ನ* 1.30 *ಕ್ಕೆ ಮತ್ತು ಸಂಜೆ* 6.30 *ಕ್ಕೆ ಒದಗಿಸಲಾಗುವುದು.*

*ಪ್ರತಿಯೊಂದು ಪ್ರಾರ್ಥನಾ ಸಭೆಯ ನಂತರ ಊಟದ ವ್ಯವಸ್ಥೆ ಮಾಡಲಾಗುವುದು.*

ಈ ಸಾಹಿತ್ಯವು ರಕ್ಷಣೆಯ ನಿಜವಾದ ಯೋಜನೆಯನ್ನು ಹೊಂದಿದೆ (ಅಪೋಸ್ತಲರ ಕೃತ್ಯಗಳು 4:12).

ಇದನ್ನು ಬಿಸಾಡಬೇಡಿ, ಬೇರೆ ಯಾರಿಗಾದರೂ ಕೊಡಿ.

ಇತರ ದೇಶಗಳಲ್ಲಿರುವವರೇ, ಈ ಸಾಹಿತ್ಯವನ್ನು ನಿಮ್ಮ ಸ್ಥಳೀಯ ಭಾಷೆಗೆ ಭಾಷಾಂತರಿಸಲು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ.

ನೀವು ಮರುಮುದ್ರಣ ಮಾಡುವುದೇ ಆದಲ್ಲಿ, ದಯವಿಟ್ಟು ಈ ಕೃತಿಸ್ವಾಮ್ಯ ಮತ್ತು ನೋಂದಣಿಯನ್ನು ಸೇರಿಸಿ:

© Copyright April 2015 All rights reserved World Pastor Tony Alamo ® Registered April 2015

KANNADA—VOLUME 21200—*SODOM AND GOMORRAH*